ದಿನಾಂಕ 05.03.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಎಂ.ಪಿ. 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಿಂದಃ

2 ನೇ ಪ್ರತಿವಾದಿ ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. 2 ನೇ ಪ್ರತಿವಾದಿಯು 5 ಮತ್ತು 6 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಆಸ್ತಿಯು ಶಿವರಾಮ ರವರ ಹೆಂಡತಿಯಾದ ಪುಟ್ಟವೆಂಕಟಮ್ಮ ಅಂದರೆ ನನ್ನ ಅಜ್ಜಿಗೆ ಸೇರಿದ ಆಸ್ತಿಯಾಗಿರುತ್ತದೆ. ನನ್ನ ತಾಯಿಗೆ ನನ್ನ ತಾತ ಶಿವರಾಮ ರವರು ನಿಪಿ-2 ರಂತೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . ಸದರಿ ದಾನಪತ್ರ ಬರೆದ ದಿನವೇ ನನ್ನ ತಾತ 2 ನೇ ಪ್ರತಿವಾದಿಗೆ ಹಾಗೂ ನನ್ನ ತಾಯಿಯಾದ 4 ನೇ ಪ್ರತಿವಾದಿಗೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಯಾವುದೇ ಮರಣ ಶಾಸನ ಪತ್ರ ಬರೆದಿರುತ್ತಾರ ಎಂದರೆ ಸಾಕ್ಷಿಯು ಸದರಿ ಮರಣ ಶಾಸನ ಪತ್ರವನ್ನು ನಾನು ಒಪ್ಪಿಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ ಸದರಿ ಮರಣ ಶಾಸನ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಮರಣ ಶಾಸನ ಪತ್ರಕ್ಕೆ ನನ್ನ ತಾಯಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ದಾನ ಪತ್ರದ ಮೂಲಕ ಬಂದಂತಹ ಆಸ್ತಿಯು ದಾನ ಪತ್ರ ಬರೆದುಕೊಟ್ಟ ನನ್ನ ತಾತನಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯು ನನ್ನ ತಾತನ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ದಾನಪತ್ರದಲ್ಲಿ ನಮೂದಿಸಿರುವ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನಮ್ಮ ತಾತನಿಗೆ ಇನ್ನೂ ಮೂವರು ಸಹೋದರರು ಇದ್ದಿರುತ್ತಾರೆ ಎಂದರೆ ಸರಿ. ಸದರಿ ಮೂವರು ಸಹ ಮರಣ ಹೊಂದಿದ್ದು ಅವರುಗಳ ಮಕ್ಕಳು ಜೀವಂತವಾಗಿರುತ್ತಾರೆ. 1 ನೇ ಪ್ರತಿವಾದಿಯು ನನ್ನ ತಾತನಾದ ಶಿವರಾಮ ರವರ ಅಣ್ಣನ ಮಗಳು. ನನ್ನ ತಂದೆಯು ನನ್ನ ತಾತನಾದ ಶಿವರಾಮ ರವರ ಅಣ್ಣನ ಮಗ ಎಂದರೆ ಸರಿ. ನನ್ನ ತಾತನ ಇನ್ನಿಬ್ಬರ ಸಹೋದರರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರಾನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ಹಾಗೂ ನಿಪಿ-2 ರ ದಾನಪತ್ರದಲ್ಲಿ ತಿಳಿಸಿರುವ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾದ್ದರಿಂದ ನನ್ನ ತಾತನ ಉಳಿದ ಇಬ್ಬರು ಸಹೋದರರ ವಾರಸುದಾರರಿಗೂ ಸಹ ಅವುಗಳಲ್ಲಿ ಸಮಾನ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅದು ಪಿತ್ರಾರ್ಜಿತ ಆಸ್ತಿಯಾದ್ದರಿಂದ ಎಲ್ಲರಿಗೂ ಸಮಾನ ಹಕ್ಕು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿ ಹಾಗೂ ನಾನು ಅನ್ಯೋನ್ಯವಾಗಿದ್ದೇವೆ. ನನ್ನ ತಾತ ತೀರಿಕೊಳ್ಳುವ ಪೂರ್ವದಲ್ಲಿ ನನ್ನ ಅಜ್ಜಿ ತೀರಿಕೊಂಡಿದ್ದರು ಎಂದರೆ ಸರಿ. ನನ್ನ ಅಜ್ಜಿಯ ಹೆಸರಿನಲ್ಲೂ

ಕೆಲವು05-03-2020 ಆಸ್ತಿಗಳಿದ್ದವು ಎಂದರೆ ಸರಿ. ನನ್ನ ಅಜ್ಜಿ ತೀರಿಕೊಂಡ ನಂತರ ಅವರಿಗೆ ಮಕ್ಕಳಿಲ್ಲದ ಕಾರಣ ಅವರ ಎಲ್ಲಾ ಆಸ್ತಿಯು ನನ್ನ ತಾತನಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯನ್ನು ಅವರುಗಳು ದತ್ತು ಪಡೆದಿದ್ದರು ಎಂದು ನುಡಿಯುತ್ತಾರೆ. ನನ್ನ 05-03-2020 ತಂದೆಯನ್ನು ದತ್ತು ಪಡೆದ ಬಗ್ಗೆ ದತ್ತುಪತ್ರ ಇರುವುದಿಲ್ಲ ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ದತ್ತು ಪತ್ರ ಬರೆಯುವ ರೂಢಿಯಲ್ಲಿರುವುದಿಲ್ಲ ಬದಲಾಗಿ ಮಡಿಲಿಗೆ ಪಡೆದುಕೊಳ್ಳುವ ಶಾಸ್ತ್ರ ಇದ್ದಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ದತ್ತು ಪಡೆದ ವಿಚಾರವಾಗಿ ನನ್ನ ತಂದೆಯ ಶಾಲಾ ದಾಖಲಾತಿಗಳಲ್ಲಿ ನನ್ನ ತಾತನ ಹೆಸರು ದತ್ತು ತಂದೆ ಎಂದು ನಮೂದಾಗಿತ್ತೋ ಇಲ್ಲವೋ ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಬಳಿ ಇದ್ದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು. )

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಸಂತೋಷ ಕೊಠಾರಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ